ಆ) ಹಾಗಿದ್ದಲ್ಲಿ, ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ;

ಇ) ಈ ಕಾಮಗಾರಿಗಾಗಿ ಸರ್ಕಾರ ಎಷ್ಟು ಹಣ ವೆಚ್ಚ ಮಾಡಿದೆ ಹಾಗೂ ಯಾವ ಸಂಸ್ಥೆ ಮೂಲಕ ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರ ಉದ್ದೇಶಿಸಿತ್ತು ;

ಈ) ಈ ಕಾಮಗಾರಿಯನ್ನು ಕಳಪೆ ಕಾಮಗಾರಿ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ವಿವರ ನೀಡುವುದು ?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ವಿರಾಜಪೇಟೆ ನೀರು ಸರಬರಾಜು ಯೋಜನೆಯನ್ನು ದಿನಾಂಕ : 30.3.2004 ರಂದು ಚಾಲನೆಗೊಳಿಸಲಾಗಿದೆ.

ಆ) ಈ ಯೋಜನೆಯ ಎಲ್ಲಾ ಕಾಮಗಾರಿಗಳು ಮುಗಿದಿದ್ದು ಹಾಲಿ ಇರುವ 150 ಮಿ.ಮೀ. ವ್ಯಾಸದ 750 ಮೀಟರ್ ಉದ್ದದ ಸಿ.ಐ. ಕೊಳವೆ ಮಾರ್ಗವನ್ನು ತೆಗೆದು ಮತ್ತೆ ಅಳವಡಿಸುವ ಕಾಮಗಾರಿಯು ಮಾತ್ರ ಬಾಕಿ ಇರುತ್ತದೆ. ಸದ್ಯದಲ್ಲೇ ಈ ಕೆಲಸವನ್ನು ಪೂರ್ಣಗೊಳಿಸಲಾಗುವುದು.

ಇ) ಜೂನ್ 2004ರ ಅಂತ್ಯದವರೆಗೆ ರೂ. 293.50 ಲಕ್ಷಗಳು ವೆಚ್ಚವಾಗಿದೆ. ಈ ಯೋಜನೆಯನ್ನು ಗುತ್ತಿಗೆದಾರರಾದ ಶ್ರೀ. ಹೆಚ್. ವಿ. ಕೃಷ್ಣ. ಹೊಳೆನರಸೀಪುರ ಇವರಿಗೆ ವಹಿಸಿ ಪೂರ್ಣಗೊಳಿಸಲಾಗಿದೆ.

ಈ) –ಇಲ್ಲ–

ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಸಹಾಯ ಧನ ಬಿಡುಗಡೆ

174(333) ಶ್ರೀ ಪಾಟೀಲ್ ಡಿ.ಆರ್.(ಗದಗ್) : ಮಾನ್ಯ ಭಾರೀ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಬಿಡುಗಡೆ ಮಾಡಬೇಕಾದ ಸಹಾಯಧನದ ಒಟ್ಟು ಮೊತ್ತ ಎಷ್ಟು ;

ಆ) ಎಷ್ಟು ವರ್ಷಗಳಿಂದ ಈ ಸಹಾಯಧನ ನೀಡಬೇಕಾಗಿದೆ ;

ಇ) ಇನ್ನು ಮುಂದಾದರೂ ಕೈಗಾರಿಕೆಗಳಿಗೆ ದೊರೆಯಬೇಕಾದ ಸಹಾಯಧನ ಅದೇ ಆರ್ಥಿಕ ವರ್ಷದಲ್ಲಿ ದೊರೆಯುವಂತೆ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರೀ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ದಿನಾಂಕ : 31–3–2004 ರವರೆಗೆ 19555 ಘಟಕಗಳಿಗೆ ರೂ. 429.443 ಕೋಟಿಗಳನ್ವಯ ಸಹಾಯಧನವಾಗಿ ನೀಡಬೇಕಾಗಿರುತ್ತದೆ.

ಆ) ಜನವರಿ 1999 ರಿಂದ ಸಹಾಯಧನವನ್ನು ಸಣ್ಣ ಕೈಗಾರಿಕಾ ಘಟಕಗಳಿಗೆ ಬಿಡುಗಡೆ ಮಾಡಬೇಕಾಗಿರುತ್ತದೆ.

ಇ) ಕೆಎಸ್ಎಫ್ಸಿ ಬಾಂಡ್‌ಗಳನ್ನು ಹೊರಡಿಸುವ ಮೂಲಕ ರೂ. 81.00 ಕೋಟಿ ಸಂಪನ್ಮೂಲ ಕ್ರೋಢೀಕರಿಸಲು ಈಗಾಗಲೇ ಕ್ರಮಗಳನ್ನು ಕೈಗೊಳ್ಳಲಾಗಿದೆ ಸಹಾಯಧನ ಮಂಜೂರಾತಿ ಆಗಿ ಹಣ ಬಿಡುಗಡೆಯಾಗಿ ಕಾಯುತ್ತಿರುವ ಘಟಕಗಳಿಗೆ ಹಣ ಪಾವತಿಸಲಾಗುವುದು.

ನಿರ್ದೇಶಕರು, ಮುದ್ರಣ ಲೇಖನ ಸಾಮಾಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು, ಕಾಸೂ–3902